ಕೃಷಿ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿ, ಮೇಲೆ ಓದಲಾದ (2) ರ ಸರ್ಕಾರದ ಆದೇಶದನ್ವಯ ಈಗಾಗಲೇ ಮೂರು ತ್ರೈಮಾಸಿಕಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಈವರೆವಿಗೂ ಶೇ.75 ರಷ್ಟು ವೆಚ್ಚ ಭರಿಸಿರುವ ಲೆಕ್ಕಶೀರ್ಷಿಕೆಗಳಡಿ ಮಾತ್ರ ನಾಲ್ಕನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 78 ಕೃಯೋಕಾ 2018, ಬೆಂಗಳೂರು, ದಿನಾಂಕ: 08-02-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನಲ್ಲಿ ಮುಂದುವರೆಸಲಾದ **ಈ ಕೆಳಕಂಡ 10 ರಾಜ್ಯವಲಯ ಯೋಜನೆಗಳಿಗೆ ನಾಲ್ಕನೇ ತ್ರೈಮಾಸಿಕಕ್ಕೆ ಒಟ್ಟು ರೂ. ರೂ.35818.55 ಲಕ್ಷಗಳ (ಮೂವತ್ತೈದು ಸಾವಿರದ ಎಂಟನೂರ ಹದಿನೆಂಟು ಲಕ್ಷ ಮತ್ತು ಐವತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | ಲೆಕ್ಕ ಶೀರ್ಷಿಕೆ | ಆಯವ್ಯದಲ್ಲಿ ಒದಗಿಸಿರುವ ಒಟ್ಟು ಮೊತ್ತ | ನಾಲ್ಕನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಬೇಕಾದ ಅನುದಾನ |
|---|---|---|---|---|
| 1. | ಕೃಷಿ ಆಯುಕ್ತಾಲಯ * (51)-ರೂ.292.5 ಲಕ್ಷಗಳು | 2401-00-001-1-01 | 5507.00 | 1084.25 |
| 2. | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತ | 2401-00-001-1-75 | 208.00 | 52.00 |
| 3. | ಬೀಜ ಕ್ಷೇತ್ರಗಳು | 2401-00-103-0-01 | 426.00 | 106.50 |
| 4. | ಕೃಷಿ ವಿಸ್ತರಣೆ ಮತ್ತು ತರಬೇತಿ *(059)- ರೂ.632.2 ಲಕ್ಷಗಳು | 2401-00-109-0-21 | 7264.00 | 1183.80 |
| 5. | ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ (WYTEP) | 2401-00-109-0-80 | 383.00 | 95.75 |
| 6. | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಹೊಸ ಬೆಳೆ ವಿಮಾ ಯೋಜನೆ) | 2401-00-110-0-07 | 84511.00 | 21127.75 |
| 7 | ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ | 2402-00-101-0-01 | 35.00 | 8.75 |
| 8. | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ *(59, 103, 133)-ರೂ.3187.75 ಲಕ್ಷಗಳು | 2401-00-103-0-15 | 60770.00 | 12062.25 |
| 9. | ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು | 2401-00-104-0-10 | 140.00 | 35.00 |
| 10. | ಸಾವಯವ ಕೃಷಿ * (59, 106)-ರೂ.1912.5 ಲಕ್ಷಗಳು | 2401-00-104-0-12 | 10000.00 | 62.50 |
| | ಒಟ್ಟು | | **169244.00** | **35818.55** |

* ಕ್ರಮ ಸಂಖ್ಯೆ: 1, 4, 8 & 10 ರ ಲೆಕ್ಕಶೀರ್ಷಿಕೆಗಳ ( ) ಆವರಣದಲ್ಲಿ ನಮೂದಿಸಿರುವ ಉಪಲೆಕ್ಕಶೀರ್ಷಿಕೆಗಳಲ್ಲಿ ಶೇ.75 ರಷ್ಟು ವೆಚ್ಚಭರಿಸದೇ ಇರುವುದರಿಂದ, 4ನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಿರುವುದಿಲ್ಲ.

--4

